೫) ಹಾಗಿಲ್ಲದಿದ್ದಲ್ಲಿ ಈ ಕಾಮಗಾರಿಯನ್ನು ೧೯೯೦-೯೧ರ ಆಯವ್ಯಯದಲ್ಲಿ ಸೇರಿಸಲಾಗುವುದೆ?

ಶ್ರೀ ಜೆ. ಪುಟ್ಟಸ್ವಾಮಿಗೌಡ (ನೀರಾವರಿ ಮತ್ತು ಲೋಕೋಪಯೋಗಿ ಸಚಿವರು).—

ಅ) ಗೊಂದಿ ಕಾಲುವೆಯ ಅಚ್ಚುಕಟ್ಟು ೧೧,೫೦೯ ಎಕರೆಗಳು ಕಾಲುವೆಯಲ್ಲಿ ಹೂಳು ತುಂಬಿರುವುದರಿಂದ ಬೇಸಿಗೆ ನೀರಾವರಿಗೆ ಮಾತ್ರ ನೀರು ಸಾಕಾಗುತ್ತಿಲ್ಲ.

ಆ) ಹೌದು.

೧೯೯೯-೯೦ರ ದರಗಳ ಮಟ್ಟದಲ್ಲಿ ೨೩೫ ಲಕ್ಷ ರೂ.ಗಳು ಅಂದಾಜನ್ನು ಮುಖ್ಯ ಎಂಜಿನಿಯರ್ ರವರು ಸರ್ಕಾರಕ್ಕೆ ಇನ್ನೂ ಸಲ್ಲಿಸಬೇಕಾಗಿದೆ.

೫) ಇಲ್ಲ.

ತುಂಗಭದ್ರಾ ನದಿಗೆ ರಾಜೋಲಿಬಂಧ ಸಮೀಪ ಅಡ್ಡಲಾಗಿ ಕಟ್ಟಿರುವ ಅಣೆಕಟ್ಟಿನ ಸ್ಫೋಟದ ಬಗ್ಗೆ

೨೯೫. ಶ್ರೀ ಡಿ. ಬಿ. ಚಂದ್ರೇಗೌಡ (ತೀರ್ಥಹಳ್ಳಿ).— ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ತುಂಗಭದ್ರಾ ನದಿಗೆ ಅಡ್ಡಲಾಗಿ ನಿರ್ಮಾಣ ಮಾಡಿರುವ ರಾಜೋಲಿ ಬಂಡಾ ಅಣೆಕಟ್ಟನ್ನು ಸ್ಫೋಟನೆ ಮಾಡಿ ಒಡೆದು ಹಾಕಲು ಪ್ರಯತ್ನ ಮಾಡಿರುವುದು ನಿಜವಾದ ಸಂಗತಿಯೇ?

ಆ) ಹಾಗಿದ್ದಲ್ಲಿ ಯಾವಾಗ?

೫) ಸರ್ಕಾರವು ಈ ದಿಸೆಯಲ್ಲಿ ಕೈಗೊಂಡ ಕ್ರಮಗಳೇನು?

ಶ್ರೀ ಜೆ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).

ಅ) ಅಹುದು. ದುಷ್ಕರ್ಮಿಗಳಿಂದ

ಆ) ದಿನಾಂಕ ೨೬-೨-೧೯೯೦ರ ರಾತ್ರಿಯಂದು

೫) ಗಮನಕ್ಕೆ ಬಂದ ಕೂಡಲೇ ಅಣೆಕಟ್ಟಿನ ಸ್ಥಳಗಳಲ್ಲಿ ಪೋಲೀಸು ಪಾರ ವ್ಯವಸ್ಥೆ ನಿರ್ವಹಣಾ ಕೆಲಸದಲ್ಲಿ ತೊಡಗಿದ ಸಿಬ್ಬಂದಿ ವರ್ಗಕ್ಕೆ ಪೋಲೀಸ್ ಬಂದೋಬಸ್ತ್ ಅಣೆಕಟ್ಟಿನ ಬಳಿ ವೀರು ಹರಿಯುವಿಕೆ ಕಡಿಮೆ ಆದ ನಂತರ ಒತ್ತಡದು ಹಾಕಲಾದ ಮರದ ಗೇಟುಗಳ ತಾತ್ಕಾಲಿಕ ದುರಸ್ತಿ ಮಾಡಿ. ಕರ್ನಾಟಕ ರಾಜ್ಯದಲ್ಲಿನ ಜೋಲಿಬಂಡಾ ಎಡದಂಡೆ ನಾಲೆಯ ಅಚ್ಚುಕಟ್ಟಿನಲ್ಲಿ ನಿಂತಿರುವ ಬೆಳೆಗಳಿಗೆ ನೀರನ್ನು ಒದಗಿಸಿರುವುದು ಮತ್ತು ಆಂಧ್ರ ಸರ್ಕಾರದೊಡನೆ ಈ ರೀತಿ ದುರ್ಘಟನೆ ಇನ್ನು ಮುಂದೆ ಸಂಭವಿಸದಂತೆ ಎಚ್ಚರಿಕೆಯಾಗಿರಬೇಕೆಂದು ಪತ್ರ ಬರೆದಿರುವುದು.

ಲೋಕೋಪಯೋಗಿ ಇಲಾಖೆಯಲ್ಲಿ ಬಾಕಿ ಇರುವ ಪಂಚಾಯ್ತಿ ಪ್ರಕರಣಗಳು

೩೫೪. ಶ್ರೀ ಪಿ. ಜಿ. ಆರ್. ಸಿಂಧ್ಯಾ (ಕನಕಪುರ).— ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಲೋಕೋಪಯೋಗಿ ಇಲಾಖೆಯಲ್ಲಿ ಬಾಕಿ ಇರುವ ಒಟ್ಟು ಪಂಚಾಯ್ತಿ ಪ್ರಕರಣಗಳ (Arbitration Cases) ಸಂಖ್ಯೆ ಎಷ್ಟು?

ಆ) ಎಲ್ಲಾ ಪಂಚಾಯ್ತಿ ಪ್ರಕರಣಗಳಲ್ಲಿ ಲೋಕೋಪಯೋಗಿ ಇಲಾಖೆಯು ಒಬ್ಬರೇ ಅಡ್ವೋಕೇಟರನ್ನು ನೇಮಿಸಿ ಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

೫) ಪಂಚಾಯ್ತಿ ಪ್ರಕರಣಗಳನ್ನು ಇತ್ಯರ್ಥಗೊಳಿಸುವಲ್ಲಿ ಆಗುತ್ತಿರುವ ವಿಳಂಬವು ಒಬ್ಬರೇ ಅಡ್ವೋಕೇಟರನ್ನು ನೇಮಿಸಿಕೊಳ್ಳುತ್ತಿರುವುದರಿಂದ, ಎಂಬುದು ನಿಜವಲ್ಲವೇ?

ಈ) ರೆಫರೆನ್ಸ್ ದಿನಾಂಕದಿಂದ ೩ ತಿಂಗಳೊಳಗೆ ಎಲ್ಲಾ ಪಂಚಾಯ್ತಿ ಪ್ರಕರಣಗಳನ್ನು ಇತ್ಯರ್ಥಗೊಳಿಸಲು ಸರ್ಕಾರವು ಕ್ರಮ ತೆಗೆದುಕೊಳ್ಳುತ್ತದೆಯೇ?